ಮುನ್ನಡೆಯಿಂದ....

# ಸೂಜಿ-ದಾರ

ಗಾರ್ಮೆಂಟ್ಸ್ ಕಾರ್ಮಿಕರ ಸಂಗಾತಿ....

ಸಂಪುಟ : 3 | ಸಂಚಿಕೆ : 4 | ಪುಟ : 8 | ಖಾಸಗಿ ಪ್ರಸಾರಕ್ಕಾಗಿ | ಜೂನ್ 2008

ಪ್ರಸ್ತಾವನೆ...


## ಗಾರ್ಮೆಂಟ್ಸ್ ಕಾರ್ಮಿಕರ ಪುಟ್ಟ ಮಕ್ಕಳ ಪೋಷಣೆಯ ವ್ಯವಸ್ಥೆ : ಹೊಣೆ ಯಾರದು?



ಸ್ನೇಹಿತರೇ,

ತಾವೆಲ್ಲರೂ ಸೂಜಿದಾರಕ್ಕೆ ತೋರಿಸುತ್ತಿರುವ ಬೆಂಬಲ, ಪ್ರೋತ್ಸಾಹ ನಮ್ಮ ಸಂತಸಗೊಳಿಸಿದೆ. ಸೂಜಿದಾರ ಕಾರ್ಮಿಕರ ದನಿಯಾಗಿ, ಜನ್ಮ ತಾಳಿ ಮೂರನೇ ವರ್ಷವನ್ನು ಯಶಸ್ವಿಯಾಗಿ ಮುಗಿಸುತ್ತಿದೆ. ಇದಕ್ಕಾಗಿ ನಿಮಗೆಲ್ಲರಿಗೂ ಅಭಿನಂದನೆಗಳು.

ನಗರಗಳಲ್ಲಿ ದುಡಿಯುವ ತಾಯಂದಿರಿಗೆ, ತಾವು ಕೆಲಸಕ್ಕೆ ಹೋದಾಗ ಮಕ್ಕಳ ಪಾಲನೆಗೆ ವ್ಯವಸ್ಥೆ ಮಾಡುವುದೇ ಒಂದು ದೊಡ್ಡ ತೊಂದರೆ. ಅದರಲ್ಲೂ ಗಾರ್ಮೆಂಟ್ಸ್‌ಗಳಲ್ಲಿ ದುಡಿಯುವ ಮಹಿಳೆಯರು ಬಹುಪಾಲು ಕೆಲಸ ಅರಸಿ ಪರ ಊರುಗಳಿಂದ ಬಂದ ಕಾರಣ ಕೆಲವೊಮ್ಮೆ ಕುಟುಂಬ ದಲ್ಲಿ ಸದಸ್ಯರಾರೂ ಇರುವುದಿಲ್ಲ, ಬರುವ ಕಡಿಮೆ ಸಂಬಳದಲ್ಲಿ ಪ್ಲೇ ಹೋಂ ನಂತಹ ದುಬಾರಿ ವ್ಯವಸ್ಥೆ ಮಾಡಲು ಸಾಧ್ಯವಿಲ್ಲ, ಕಾರ್ಖಾನೆಗಳಲ್ಲಿ ಕ್ರಷ್ ಇರುವುದಿಲ್ಲ, ಕೆಲವೇ ಕಾರ್ಖಾನೆಯಲ್ಲಿ ಇದ್ದರೂ ಅಲ್ಲಿನ ವ್ಯವಸ್ಥೆ ಚೆನ್ನಾಗಿಲ್ಲ, ಇಂತಹ ಸಂದರ್ಭದಲ್ಲಿ ಮಕ್ಕಳನ್ನು ಒಬ್ಬರೇ ಮನೆಯ ಬಳಿ ಆಟವಾಡಿಕೊಂಡಿರಲು ಬಿಡಬೇಕು, ಇಲ್ಲವೇ ತಮ್ಮ ಹುಟ್ಟಿದೂರಿನಲ್ಲಿ ತಾಯಿಯ ಮನೆಯಲ್ಲಿ ಬಿಡಬೇಕು, ಇವೆರಡೇ ಈ ಮಹಿಳೆಯರಿಗೆ ಇರುವ ಅವಕಾಶಗಳು.



ಇಂದು ಬೆಂಗಳೂರಿನಲ್ಲಿ ಪುಟ್ಟ ಮಕ್ಕಳನ್ನು ಮನೆಯ ಬಳಿ ಆಟವಾಡಲು ಬಿಡುವುದೂ ಸಹ ಸುರಕ್ಷಿತವಿಲ್ಲ, ಉದಾಹರಣೆಗೆ ಈಗ್ಗೆ ಎರಡು ವರ್ಷಗಳ ಹಿಂದೆ ಸುಂಕದ ಕಟ್ಟೆಯಲ್ಲಿ ವಾಸಿಸುತ್ತಿದ್ದ ಮಹಿಳಾ ಕಾರ್ಮಿಕರ ಪುಟ್ಟ ಮಕ್ಕಳಿಬ್ಬರು ಮಧ್ಯಾಹ್ನ ಶೌಚಾಲಯಕ್ಕೆಂದು ಕೆರೆಯ ಬಳಿಗೆ ಹೋಗಿ ಮುಳುಗಿ ಸಾವನ್ನಪ್ಪಿದ್ದರು, ಮತ್ತೊಂದು ಘಟನೆಯಲ್ಲಿ, ತಾಯಿ ಕೆಲಸಕ್ಕೆ ಹೋದ ಸಂದರ್ಭದಲ್ಲಿ ಮನೆಯಲ್ಲಿದ್ದ 7 ಹಾಗೂ 5 ವರ್ಷದ ಪುಟ್ಟ ಮಕ್ಕಳಿಬ್ಬರು ಟಿ.ವಿ. ಕಾರ್ಯಕ್ರಮ ವೊಂದನ್ನು ನೋಡುತ್ತಾ ಅದರಂತೆಯೇ ಬೆಂಕಿ ಹಚ್ಚಿ ಕೊಂಡು ಸುಟ್ಟು ಕರಕಲಾದ ಘಟನೆ ಎಂತಹವರ ಮನಸ್ಸನ್ನೂ ಕಲಕಿತ್ತು. ಈ ಪುಟ್ಟ ಕಂದಮ್ಮಗಳನ್ನು ಪೋಷಣೆ ಮಾಡುವವರಿದ್ದಿದ್ದರೆ ಹೀಗಾಗುತ್ತಿತ್ತೇ?ಇವೆರಡೂ ಗಮನಕ್ಕೆ ಬಂದದ್ದಷ್ಟೇ! ಬಾರದ್ದೆಷ್ಟೋ !!!

ಹೀಗಾದಾಗ ಇದರ ಹೊಣೆ ಯಾರದು? ಕಾನೂನಿನ ಪ್ರಕಾರ ಯಾವುದೇ ಕಾರ್ಖಾನೆಯಲ್ಲಿ 30 ಮಂದಿಗಿಂತ ಹೆಚ್ಚು ಮಹಿಳೆಯರಿದ್ದರೆ ಅಲ್ಲಿ 7 ವರ್ಷದವರೆಗೂ ಮಕ್ಕಳನ್ನು ನೋಡಿಕೊಳ್ಳಲು ಸುಸಜ್ಜಿತ ಕ್ರಷ್ ಇರಲೇಬೇಕು, ಅಲ್ಲಿ ತೊಟ್ಟಿಲಿರಬೇಕು, ಆಟಿಗೆಗಳಿರ ಬೇಕು, ಹೊತ್ತು ಹೊತ್ತಿಗೆ ಮಕ್ಕಳಿಗೆ ಹಾಲು ಬ್ರೆಡ್, ಊಟ ವಿತರಿಸಬೇಕು, ಹಾಲು ಕುಡಿಸುವ ತಾಯಂದಿರಿದ್ದರೆ ದಿನಕ್ಕೆ ಎರಡು ಸಾರಿ ಹಾಲು ಕುಡಿಸಲು ಬಿಡುವು ಕೊಡಬೇಕು, ತರಬೇತಿ ಪಡೆದ ಆಯಾ ಆ ಮಕ್ಕಳನ್ನು ನೋಡಿಕೊಳ್ಳಬೇಕು. ಇವೆಲ್ಲವೂ ಮಾಲೀಕರು ಕಡ್ಡಾಯವಾಗಿ ಪಾಲಿಸಲೇ ಬೇಕು.



ಆದರೆ ಇಂದು ಕೆಲವೇ ಕಾರ್ಖಾನೆಗಳು ಕ್ರಷ್ ವ್ಯವಸ್ಥೆಯನ್ನು ಹೊಂದಿವೆ. ಅವೂ ಸಹ ಸರಿಯಾಗಿ ಕೆಲಸ ನಿರ್ವಹಿಸುತ್ತಿಲ್ಲ. ಮಕ್ಕಳನ್ನು ನೋಡಿಕೊಳ್ಳಲು ತರಬೇತಿ ಹೊಂದಿರುವ ಆಯಾಗಳು ಇಲ್ಲ. ಕೆಲವೊಂದು ಕಾರ್ಖಾನೆಗಳಲ್ಲಿ ಕಸ ಗುಡಿಸುವ ಹಾಗೂ ಟೀ ಕಾಫಿ ಮಾಡುವ ಕೆಲಸಗಾರರನ್ನು ಮಕ್ಕಳನ್ನು ನೋಡಿಕೊಳ್ಳಲು ಬಿಡಲಾಗಿದೆ, ಕೆಲವೊಂದು ಕಾರ್ಮಿಕರ ಅನುಭವದಲ್ಲಿ ಮಕ್ಕಳಿಗೆ ನಿದ್ದೆ ಮಾತ್ರೆ ಹಾಕಿ ಮಕ್ಕಳನ್ನು ಯಾವಾಗಲು ಮಲಗಿಸಿರುತ್ತಾರೆ. ಕೆಲವೊಮ್ಮೆ ಜನರೇಟರ್ ರೂಮ್ ನ ಪಕ್ಕದಂತಹ ಅಪಾಯಕಾರಿ ಸ್ಥಳಗಳಲ್ಲಿ ಈ ಕ್ರಷ್ ಗಳ ವ್ಯವಸ್ಥೆಯನ್ನು ಮಾಡಲಾಗಿದೆ.



ಪರಿಸ್ಥಿತಿ ಹೀಗಿವಾಗ ಗಾರ್ಮೆಂಟ್ಸ್ ತಾಯಂದಿರು ತಮ್ಮ ಮಕ್ಕಳನ್ನು ಏನು ಮಾಡುತ್ತಾರೆ ಎಂಬುದರ ಬಗ್ಗೆ ಗಂಭೀರವಾಗಿ ಚಿಂತಿಸಿದ ಮುನ್ನಡೆ ಮೈಸೂರು ರಸ್ತೆ, ಹಾಗೂ ಪೀಣ್ಯ ಪ್ರದೇಶದಲ್ಲಿ ಆಯ್ದ 10 ಗಾರ್ಮೆಂಟ್ಸ್ ಕಾರ್ಖಾನೆಗಳ 300 ಮಹಿಳಾ ಕಾರ್ಮಿಕರನ್ನು (ಎಲ್ಲರೂ ಮಕ್ಕಳನ್ನು ಹೊಂದಿರುವವರು) ಸಂದರ್ಶಿಸಿ ಒಂದು ಸಮೀಕ್ಷೆ ನಡೆಸಿತು. ಸಮೀಕ್ಷೆಯ ವಿವರಗಳು ಈ ಕೆಳಗಿನಂತಿವೆ.

## ಪಟ್ಟಿ 1. ಕಾರ್ಮಿಕರು ಹಾಗೂ ಮಕ್ಕಳ ವಿವರಗಳು

| ಕಾರ್ಖಾನೆ | ಕಾರ್ಮಿಕರ ಸಂಖ್ಯೆ | ಮಕ್ಕಳ ಸಂಖ್ಯೆ | | | 7 ವರ್ಷಕ್ಕಿಂತ ಕಡಿಮೆ ಇರುವ ಮಕ್ಕಳ ಸಂಖ್ಯೆ |
|---|---|---|---|---|---|
| | | ಗಂ | ಹೆಂ | ಒಟ್ಟು | |
| ವಿಗೋಸಾ ಎಕ್ಸ್ ಪೋರ್ಟ್ಸ್ | 30 | 27 | 24 | 51 | 18 |
| ರಿಬೌಂಡ್ ಎಕ್ಸ್ ಪೋರ್ಟ್ಸ್ | 29 | 24 | 26 | 50 | 35 |
| ಶಾಲಿನಿ ಕ್ರಿಯೇಶನ್ಸ್ | 30 | 29 | 24 | 53 | 24 |
| ಎಚ್.ಪಿ.ಎಫ್ | 30 | 27 | 24 | 51 | 24 |
| ಬಾಂಬೆರೆಯಾನ್ ಫ್ಯಾಷನ್ಸ್ ಲಿ. | 30 | 21 | 30 | 51 | 16 |
| ಅರವಿಂದ್ ಮಿಲ್ಸ್ | 31 | 24 | 35 | 59 | 28 |
| ಮಂದಾನ | 30 | 30 | 31 | 51 | 28 |
| ವಿ.ಎಫ್ ಇಂಡಿಯಾ(ಟೆಕ್ಸ್ ಪೋರ್ಟ್ಸ್ ಇಂಡಸ್ಟ್ರೀಸ್) | 30 | 23 | 31 | 54 | 22 |
| ವಿ.ಕೆ.ಎನ್ ಎಕ್ಸ್‌ಪೋರ್ಟ್ಸ್ | 30 | 31 | 26 | 57 | 22 |
| ಟೆಕ್ಸ್‌ಪೋರ್ಟ್ ಕ್ರಿಯೇಶನ್ಸ್ | 30 | 24 | 28 | 52 | 24 |

ಈ ಮೇಲಿನ ಪಟ್ಟಿಯಿಂದ ಎರಡು ವಿಷಯಗಳು ಸ್ಪಷ್ಟವಾಗುತ್ತವೆ.

1. ಸಂದರ್ಶನ ಮಾಡಿದ 300 ಕಾರ್ಮಿಕರಲ್ಲಿ ಮದುವೆಯಾಗಿ, ಮಕ್ಕಳನ್ನು ಹೊಂದಿರುವ ಮಹಿಳೆಯರ ಸಂಖ್ಯೆ ಗಣನೀಯ ಪ್ರಮಾಣದಲ್ಲಿದೆ ಹಾಗೂ ಮಕ್ಕಳನ್ನು ನೋಡಿಕೊಳ್ಳುವ ಮುಖ್ಯ ಜವಾಬ್ದಾರಿ ಅವರ ಮೇಲಿದೆ.

2. ಎರಡನೆಯದಾಗಿ, ಇಲ್ಲಿ ದೊಡ್ಡವರ ಪಾಲನೆ ಪೋಷಣೆ ಅವಶ್ಯವಾಗಿ ಬೇಕಾಗಿರುವ ಚಿಕ್ಕ ವಯಸ್ಸಿನ ಮಕ್ಕಳು ತುಂಬಾ ಇದ್ದಾರೆ. ಸಂದರ್ಶನ ನಡೆಸಿದ ಕಾರ್ಮಿಕರ 529 ಮಕ್ಕಳಲ್ಲಿ, ಸುಮಾರು ಅರ್ಧದಷ್ಟು(46%) ಮಕ್ಕಳು 7 ವರ್ಷಕ್ಕಿಂತ ಚಿಕ್ಕವರು.

   ಈ ಸಮೀಕ್ಷೆಯಿಂದ ಕಂಡುಬಂದ ಮುಖ್ಯ ವಿಚಾರವೆಂದರೆ, ಕಾರ್ಖಾನೆಯಲ್ಲಿ ಇರುವ ಕ್ರಷ್ ಗಳನ್ನು ಈ ಮಹಿಳೆಯರು ಅತಿ ಕಡಿಮೆ ಬಳಸಿಕೊಳ್ಳುತ್ತಿರುವುದು. ಇಡೀ ನಮೂನೆಯಲ್ಲಿ ನೋಡಿದರೆ 529 ಮಕ್ಕಳಲ್ಲಿ ಬರೀ 33 ಮಕ್ಕಳು ಕಾರ್ಖಾನೆಯ ಕ್ರೀಚ್ ಅನ್ನು ಬಳಸಿಕೊಳ್ಳುತ್ತಿದ್ದಾರೆ. ಇದರ ಬಗ್ಗೆ ಕಾರ್ಮಿಕರದು ವಿವಿಧ ಅನುಭವ ಹೀಗಿದೆ:

   - *ಒಬ್ಬ ಮಹಿಳಾ ಕಾರ್ಮಿಕರು, ತಮ್ಮ ಕಾರ್ಖಾನೆಯಲ್ಲಿ ಮಕ್ಕಳನ್ನು ಬಿಡಲು ಯತ್ನಿಸಿ, ಅಲ್ಲಿಯ ವ್ಯವಸ್ಥೆ ಚೆನ್ನಾಗಿಲ್ಲದಿರುವುದರಿಂದ ಪಕ್ಕದ ಮನೆಯವರಿಗೆ ದುಡ್ಡು ಕೊಟ್ಟು ನೋಡಿಕೊಳ್ಳಲು ಹೇಳಿದ್ದೇನೆ ಎಂದು ಸ್ಪಷ್ಟವಾಗಿ ಹೇಳಿದರು.*
   - *ಮತ್ತೊಬ್ಬ ಮಹಿಳಾ ಕಾರ್ಮಿಕರ ಅನುಭವವೇನೆಂದರೆ, ಕಾರ್ಖಾನೆಯ ಕ್ರಷ್‌ನಲ್ಲಿ ಈಗಾಗಲೇ ತುಂಬ ಮಕ್ಕಳು ಸೇರಿದ್ದರಿಂದ ಅವರ ಮಗುವಿಗೆ ಪ್ರವೇಶ ದೊರೆಯಲಿಲ್ಲ.*
   - *ಮತ್ತೊಬ್ಬ ಮಹಿಳಾ ಕಾರ್ಮಿಕರ ಅನುಭವವೆಂದರೆ, ಅವರ ಕಾರ್ಖಾನೆಯಲ್ಲಿ ಮೂರು ವರ್ಷದ ಒಳಗಿನ ಮಕ್ಕಳನ್ನು ಮಾತ್ರ ನೋಡಿಕೊಳ್ಳಲು ಅವಕಾಶವಿರುವುದರಿಂದ, ಮೂರು ವರ್ಷವಾದ ನಂತರ ಅವರೇ ಕ್ರೀಚ್‌ನಿಂದ ಮಗುವನ್ನು ಹೊರತರಬೇಕಾಯಿರು.*

ಕಾರ್ಖಾನೆಯಲ್ಲಿ ಒಳ್ಳೆಯ ಕ್ರೀಚ್ ವ್ಯವಸ್ಥೆಯನ್ನು ಕೊಟ್ಟರೆ, ಮಕ್ಕಳನ್ನು ಅಲ್ಲಿಯೇ ಬಿಡುತ್ತೇವೆ ಎಂಬುದರ ಬಗ್ಗೆ ಎಲ್ಲ ಮಹಿಳೆಯರಲ್ಲಿಯೂ ಐಕ್ಯಮತ್ಯವಿದೆ.

## ಪಟ್ಟಿ 2: ಮಕ್ಕಳನ್ನು ನೋಡಿಕೊಳ್ಳುವ ವ್ಯವಸ್ಥೆ

| ಕಾರ್ಖಾನೆ | ಒಟ್ಟು ಮಕ್ಕಳು | ಮಕ್ಕಳನ್ನು ನೋಡಿಕೊಳ್ಳುವ ವ್ಯವಸ್ಥೆ | | | | |
|---|---|---|---|---|---|---|
| | | ಸಂಬಂಧಿಕರು | ಪಕ್ಕದ ಮನೆ | ಪ್ಲೇ ಹೋಂ | ಕಾರ್ಖಾನೆ ಕ್ರಷ್ | ಯಾರೂ ಇಲ್ಲ |
| ವಿಗೋಸಾ ಎಕ್ಸ್ ಪೋರ್ಟ್ಸ್ | 51 | 37 | ೦ | 1 | ೦ | 13 |
| ರಿಬೌಂಡ್ ಎಕ್ಸ್ ಪೋರ್ಟ್ಸ್ | 50 | 15 | 13 | 1 | 6 | 11 |
| ಶಾಲಿನಿ ಕ್ರಿಯೇಶನ್ಸ್ | 53 | 23 | 2 | ೦ | 7 | 16 |
| ಎಚ್.ಪಿ.ಎಫ್ | 51 | 16 | 3 | ೦ | 8 | 24 |
| ಬಾಂಬೆರೆಯಾನ್ ಫ್ಯಾಷನ್ಸ್ ಲಿ. | 51 | 27 | ೦ | 3 | ೦ | 16 |
| ಅರವಿಂದ್ ಮಿಲ್ಸ್ | 59 | 17 | 1 | 5 | 6 | 28 |
| ಮಂದಾನ | 51 | 17 | 7 | 6 | 2 | 18 |
| ವಿ.ಎಫ್ ಇಂಡಿಯಾ(ಟೆಕ್ಸ್ ಪೋರ್ಟ್ಸ್ ಇಂಡಸ್ಟ್ರೀಸ್) | 54 | 27 | 8 | 1 | 1 | 16 |
| ವಿ.ಕೆ.ಎನ್ ಎಕ್ಸ್‌ಪೋರ್ಟ್ಸ್ | 57 | 26 | ೦ | 2 | 2 | 22 |
| ಟೆಕ್ಸ್‌ಪೋರ್ಟ್ ಕ್ರಿಯೇಶನ್ಸ್ | 52 | 24 | 2 | 2 | 1 | 18 |

ಈ ಪಟ್ಟಿಯ ಪ್ರಕಾರ ಗಾರ್ಮೆಂಟ್ಸ್ ಕಾರ್ಮಿಕರು 4 ರೀತಿಯ ವ್ಯವಸ್ಥೆಯನ್ನು ಮಾಡಿಕೊಂಡಿರುವುದು ಸ್ಪಷ್ಟವಾಗುತ್ತದೆ.

1. ಶೇ 4 ರಷ್ಟು ಮಕ್ಕಳನ್ನು ಮಾತ್ರ ಖಾಸಗೀ ಪ್ಲೇಹೋಂಗೆ ಸೇರಿಸಿದ್ದಾರೆ ಅಥವಾ ಆಯಾಗಳನ್ನು ನೇಮಿಸಿಕೊಂಡಿದ್ದಾರೆ. ಆದರೆ ಇದಕ್ಕೆ ಕಾರ್ಮಿಕರು ಸುಮಾರು 300 ರಿಂದ 500 ರೂ. ವರೆಗೂ ಪಾವತಿಸಬೇಕಾಗಿದೆ.
2. ಶೇ 7 ರಷ್ಟು ಮಕ್ಕಳನ್ನು ಪಕ್ಕದ ಮನೆಯವರಲ್ಲಿ, ಗೆಳೆಯರ ಮನೆಯಲ್ಲಿ ಹಣ ಕೊಟ್ಟು ಬಿಡುತ್ತಿದ್ದಾರೆ. ಕಡಿಮೆ ಸಂಬಳಕ್ಕೆ ದುಡಿಯುವ ತಾಯಂದಿರಿಗೆ ಈ ವ್ಯವಸ್ಥೆಗಳು ಹೊರೆಯೇ ಆಗುತ್ತದೆ.
3. ಹೆಚ್ಚಿನ ಮಕ್ಕಳು (43%) ಕುಟುಂಬದ ಇತರ ಸದಸ್ಯರ ಪೋಷಣೆಯಲ್ಲಿ ಬೆಳೆಯುತ್ತಿದ್ದಾರೆ. ಕಾರ್ಮಿಕರು ತಮ್ಮ ಮಕ್ಕಳನ್ನು ತಾಯಿ, ಅತ್ತೆ, ಅಕ್ಕ, ಕೆಲವೊಮ್ಮೆ ಮಗುವಿನ ತಂದೆಯ ಬಳಿ ಬಿಡುತ್ತಿದ್ದಾರೆ. ಇನ್ನೂ ಕೆಲವು ಕಾರ್ಮಿಕರು ತಮ್ಮ ಹುಟ್ಟೂರು ಎಷ್ಟೇ ದೂರದಲ್ಲಿದ್ದರೂ, (ಚೆನ್ನಪಟ್ಟಣ, ಮಳವಳ್ಳಿ, ಆಂಧ್ರಪ್ರದೇಶ) ಅಲ್ಲಿಯೇ ತಮ್ಮ ತಾಯಿ, ಅತ್ತೆಯ ಬಳಿ ಬಿಟ್ಟಿದ್ದಾರೆ. ಇದರಿಂದ ಮಕ್ಕಳು ಬಾಲ್ಯದಲ್ಲಿಯೇ ತಾಯಿಯಿಂದ ದೂರವಿರುವ ಪರಿಸ್ಥಿತಿ ಒದಗಿದೆ.
4. ಇನ್ನು ಕೊನೆಯದಾಗಿ, ಸುಮಾರು ಶೇ. 34 ರಷ್ಟು ಮಕ್ಕಳನ್ನು ಯಾರೂ ನೋಡಿಕೊಳ್ಳುವುದಿಲ್ಲ. ಇವರಲ್ಲಿ 3–4 ವಯಸ್ಸಿನ ಮಕ್ಕಳೂ ಇದ್ದಾರೆ. ಹೆಚ್ಚಿನ ಮಕ್ಕಳು ಶಾಲೆ ಬಿಟ್ಟ ಮೇಲೆ, ತಮ್ಮ ತಂದೆ ತಾಯಿ ಬರುವವರೆಗೂ ಮನೆಯ ಬಳಿ ಆಟವಾಡುತ್ತಿರುತ್ತಾರೆ. ಹೀಗಾಗಿ ಕೊಂಚ ದೊಡ್ಡ ಮಗುವಿಗೆ ತನ್ನ ತಮ್ಮ, ತಂಗಿಯರನ್ನು ನೋಡಿಕೊಳ್ಳುವ ಜವಾಬ್ದಾರಿಯು ಚಿಕ್ಕ ವಯಸ್ಸಿನಿಂದಲೇ ಬೀಳುತ್ತಿದೆ.

ಇವೆಲ್ಲದಕ್ಕೆ ಪರಿಹಾರವೆಂದರೆ ಕಾನೂನು ಪ್ರಕಾರ ತಮ್ಮಲ್ಲಿ ಕೆಲಸ ಮಾಡುವ ಕಾರ್ಮಿಕರ ಮಕ್ಕಳ ಪೋಷಣೆಯ ಹೊಣೆ ಮಾಲೀಕರದೇ ಆಗಿರುವುದರಿಂದ ಪ್ರತಿಯೊಂದು ಕಾರ್ಖಾನೆಗಳಲ್ಲಿ ಸುಸಜ್ಜಿತ ಕ್ರಷ್ ವ್ಯವಸ್ಥೆಯನ್ನು ಮಾಡಲೇಬೇಕು. ಆಗ ಕಾರ್ಮಿಕರೂ ಸಹ ತಮ್ಮ ಮಕ್ಕಳು ಏನು ಮಾಡುತ್ತಿದ್ದಾರೋ ಎಲ್ಲಿದ್ದಾರೋ ಎಂಬ ಒತ್ತಡವಿಲ್ಲದೆ ಕೆಲಸ ಮಾಡಲು ಸಾಧ್ಯವಾಗುತ್ತದೆ ಎಂದು 'ಮುನ್ನಡೆ' ಆಗ್ರಹಿಸುತ್ತದೆ. ❑



Scanned with OKEN Scanner

# ಬಾಲಸೇವಿಕಾ ತರಬೇತಿ

*ಆತ್ಮೀಯ ಕಾರ್ಮಿಕರೇ,ಇದೊಂದು ಸದವಕಾಶ!*

ಸಂವಾದ ಹಾಗೂ ಕೆ.ಎಸ್.ಸಿ.ಸಿ.ಡಬ್ಲ್ಯೂ ಸಂಸ್ಥೆಗಳ ಸಹಯೋಗದಲ್ಲಿ ಎಸ್.ಎಸ್.ಎಲ್.ಸಿ/ಪಿ.ಯು.ಸಿ ಪಾಸ್ ಅಥವಾ ಫೇಲ್ ಆದ ಹೆಣ್ಣುಮಕ್ಕಳಿಗೆ ಬಾಲಸೇವಿಕಾ ತರಬೇತಿಗಳು ನಡೆಯುತ್ತಿದ್ದು, ಪ್ರಸ್ತುತ 46 ನೇ ಬ್ಯಾಚ್‌ಗೆ ಅರ್ಜಿಗಳನ್ನು ಕರೆದಿದೆ.

ಮಕ್ಕಳನ್ನು ಸುರಕ್ಷಿತವಾಗಿ ನೋಡಿಕೊಳ್ಳುವ ,ಮತ್ತು ಅವರ ಬೆಳವಣಿಗೆಗೆ ಪೂರಕ ವಾತಾವರಣವನ್ನು ಕಲ್ಪಿಸಲು ಬೇಕಾಗುವ ಕೌಶಲ್ಯಗಳನ್ನು ಈ ತರಬೇತಿಯಲ್ಲಿ ನೀಡಲಾಗುತ್ತದೆ. ಇದನ್ನು ಯಶಸ್ವಿಯಾಗಿ ಪೂರೈಸಿದವರು, ಗಾರ್ಮೆಂಟ್ಸ್ ಕಾರ್ಖಾನೆಗಳ ಕ್ರಷ್‌ಗಳಲ್ಲಿ ಅಥವಾ ವಿವಿಧ ಸಂಸ್ಥೆಗಳು ನಡೆಸುವ ಕ್ರಷ್ ಗಳಲ್ಲಿ ಟೀಚರ್ ಆಗಬಹುದು.

ಕೋರ್ಸ್‌ಗೆ ಸಂಬಂಧಿಸಿದ ಮಾಹಿತಿಗಳು ಈ ಕೆಳಗಿನಂತಿವೆ. ಮೊದಲು ಬಂದವರಿಗೆ ಮೊದಲ ಅದ್ಯತೆ.

| | |
|---|---|
| ಪ್ರವೇಶ | : ಜೂನ್‌ನಲ್ಲಿ ಪ್ರಾರಂಭವಾಗುತ್ತದೆ. |
| ವಯೋಮಿತಿ | : 18 ವರ್ಷದಿಂದ 35 ವರ್ಷದ ಒಳಗಿನ ಮಹಿಳೆಯರು |
| ಅರ್ಹತೆ | : ಎಸ್.ಎಸ್.ಎಲ್.ಸಿ/ಪಿ.ಯುಸಿ ಪಾಸ್ ಅಥವಾ ಫೇಲ್<br>ಕನ್ನಡ ಚೆನ್ನಾಗಿ ಓದಲು ಬರೆಯಲು ಬರಬೇಕು |
| ತರಬೇತಿಯ ಅವಧಿ: | ಹತ್ತು ತಿಂಗಳು (ಅಗತ್ಯವಿದ್ದವರಿಗೆ ಹಾಸ್ಟೆಲ್ ಸೌಲಭ್ಯವಿದೆ) |
| ತರಬೇತಿಯ ಶುಲ್ಕ | : 2100 ರೂ. |
| ಸ್ಕಾಲರ್‌ಶಿಪ್ | : ಫೀಸ್ ಕಟ್ಟಲು ಸಾಧ್ಯವಿಲ್ಲದವರು ಅಗತ್ಯ ಮಾಹಿತಿ ನೀಡಿದರೆ ಸ್ಕಾಲರ್‌ಶಿಪ್ ನೀಡಲಾಗುವುದು. |

ಆಸಕ್ತಿಯುಳ್ಳವರು ಮುನ್ನಡೆಯನ್ನು ಈ ಸಂಖ್ಯೆಯಲ್ಲಿ ಸಂಪರ್ಕಿಸಬಹುದು :

**9449506451 / 9739200749**

# ಮೈಸೂರು ರಸ್ತೆಯಲ್ಲಿ ಕಾರ್ಮಿಕರು ರಸ್ತೆ ದಾಟಲು ನೆರವಾಗುತ್ತಿರುವ ಟ್ರಾಫಿಕ್ ಪೊಲೀಸ್

ಸ್ನೇಹಿತರೇ,

ಮೈಸೂರು ರಸ್ತೆಯ ಗುಡ್ಡದ ಹಳ್ಳಿಯಲ್ಲಿರುವ ಹಿಂದೂಜಾ ಪ್ರೊಸೆಸಿಂಗ್ ಅಂಡ್ ಫಿನಿಶಿಂಗ್ (ಎಚ್.ಪಿ.ಎಫ್) ಹಾಗೂ ವಿಗೋಸಾ ಎಕ್ಸ್‌ಪೋರ್ಟ್ಸ್ ಕಾರ್ಖಾನೆಯ ಕಾರ್ಮಿಕರು ರಸ್ತೆ ದಾಟಲು ನೆರವಾಗುವಂತೆ ದಿನಾಂಕ 12.6.2008 ರಿಂದ ಟ್ರಾಫಿಕ್ ಪೋಲೀಸ್ ಒಬ್ಬರನ್ನು ನೇಮಿಸಲಾಗಿದೆ.

ನಿಮಗೇ ತಿಳಿದಿರುವಂತೆ, ನಗರದಲ್ಲಿ ಅತಿ ಹೆಚ್ಚು ಟ್ರಾಫಿಕ್ ರಸ್ತೆಗಳಲ್ಲಿ ಮೈಸೂರು ರಸ್ತೆಯೂ ಒಂದು. ಇಲ್ಲಿ ಒಂದು ಬದಿಯಿಂದ ಇನ್ನೊಂದು ಬದಿಗೆ ರಸ್ತೆ ದಾಟುವುದೆಂದರೆ ಸಾಹಸ ಮಾಡಿದಂತೆಯೇ ಆಗುತ್ತದೆ. ಮುಖ್ಯವಾಗಿ ಇಲ್ಲಿ ಎಚ್ ಪಿ. ಎಫ್ ಹಾಗೂ ವಿಗೋಸಾ ಎಕ್ಸ್‌ಪೋರ್ಟ್ಸ್ ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲಿ ಸುಮಾರು 3000 ಮಹಿಳಾ ಕಾರ್ಮಿಕರು ಕೆಲಸ ಮಾಡುತ್ತಿದ್ದು, ಎಲ್ಲರೂ, ಸುತ್ತಮುತ್ತಲ ಅಂಚೆಪಾಳ್ಯ, ಕಸ್ತೂರಬಾನಗರ, ಆವಲಹಳ್ಳಿ, ರುದ್ರಪ್ಪಗಾರ್ಡನ್ ಹಾಗೂ ಬ್ಯಾಟರಾಯನಪುರದ ನಿವಾಸಿಗಳೇ ಆಗಿದ್ದಾರೆ.

ಈ ಮಹಿಳಾ ಕಾರ್ಮಿಕರು ಕಾರ್ಖಾನೆಗೆ ಬರುವಾಗ ಹೋಗುವಾಗ, ಜೀವ ಬಿಗಿ ಹಿಡಿದು ಮೈಸೂರು ರಸ್ತೆಯನ್ನು ದಾಟಬೇಕಾಗಿದೆ. ಕಾರ್ಖಾನೆಗೆ 5 ನಿಮಿಷ ತಡವಾದರೂ ಸೇರಿಸುವುದಿಲ್ಲವೆಂದು ಈ ಮಹಿಳೆಯರು ಕೆಲವೊಮ್ಮೆ ವೇಗವಾಗಿ ಬರುತ್ತಿರುವ ಭಾರೀ ವಾಹನಗಳನ್ನೂ ಲೆಕ್ಕಿಸದೇ ನುಗ್ಗುತ್ತಾರೆ. ಇದರಿಂದ ಹಲವು ಬಾರಿ ಅಪಘಾತಗಳು ಸಂಭವಿಸಿ, ಕಾರ್ಮಿಕರು ಜೀವ ಕಳೆದುಕೊಂಡ ಉದಾಹರಣೆಗಳಿವೆ.

ಕಸ್ತೂರಬಾ ನಗರದ ಮುನ್ನಡೆಯ ಸ್ಫೂರ್ತಿ ಲೋಕಲ್ ಕಮಿಟಿ ಹಾಗೂ ಮಿಂಚು ಲೋಕಲ್ ಕಮಿಟಿಗಳ ಸದಸ್ಯರು, ಪ್ರತಿ ಹದಿನೈದು ದಿನಕ್ಕೊಮ್ಮೆ ನಡೆಯುವ ಸಭೆಯಲ್ಲಿ ಈ ಸಮಸ್ಯೆಯನ್ನು ಕುರಿತು ಚರ್ಚಿಸಿ, ತಮ್ಮ ಏರಿಯಾದ ಮಹಿಳೆಯರು ಇದರಿಂದ ತೊಂದರೆಗೊಳಗಾಗುತ್ತಿದ್ದಾರೆ ಎಂದು ತಿಳಿದು ಇದಕ್ಕೆ ಕ್ರಮ ಕೈಗೊಳ್ಳಲೇ ಬೇಕೆಂದು ತೀರ್ಮಾನಿಸಿದವು. ಇದರ ಪರಿಣಾಮವಾಗಿ ಅಲ್ಲಿನ ನಿವಾಸಿಗಳಾದ ಕಾರ್ಮಿಕರು ಮುನ್ನಡೆಗೆ ಒಂದು ಪತ್ರ ಬರೆದು ತಮ್ಮ ಈ ಸಮಸ್ಯೆಯನ್ನು ಸಂಬಂಧ ಪಟ್ಟವರಿಗೆ ತಿಳಿಸಬೇಕೆಂದು ಕೋರಿದಾಗ ಮುನ್ನಡೆಯು ದಿನಾಂಕ 7.6.2008 ರಂದು ಬ್ಯಾಟರಾಯನಪುರ ಟ್ರಾಫಿಕ್ ಪೊಲೀಸ್‌ಠಾಣೆಗೆ ಮನವಿ ಪತ್ರ ನೀಡಿತು. ತಕ್ಷಣವೇ ಸ್ಪಂದಿಸಿದ ಟ್ರಾಫಿಕ್ ಪೊಲೀಸ್ ಸಿಬ್ಬಂದಿಯು, ದಿನಾಂಕ 12.6.200 ರಿಂದ ಬೆಳಗ್ಗೆ 8.00 ರಿಂದ 9.00ರ ವರೆಗೆ ಹಾಗೂ ಸಂಜೆ 5.00 ರಿಂದ 6.30ರ ವರೆಗೆ ಮೈಸೂರು ರಸ್ತೆಯ ಗುಡ್ಡದ ಹಳ್ಳಿಯ ಬಳಿ ಟ್ರಾಫಿಕ್ ಪೋಲೀಸ್ ಒಬ್ಬರನ್ನು ನೇಮಿಸಿದ್ದಾರೆ. ಇದರಿಂದ ಕಾರ್ಮಿಕರು ಸುರಕ್ಷಿತವಾಗಿ ರಸ್ತೆ ದಾಟಲು ಅನುಕೂಲವಾಗಿದೆ.

ಮುನ್ನಡೆಯ ಮನವಿಗೆ ಇಷ್ಟು ಬೇಗ ಸ್ಪಂದಿಸಿದ ಬ್ಯಾಟರಾಯನಪುರ ಟ್ರಾಫಿಕ್ ಪೊಲೀಸ್ ಸಿಬ್ಬಂದಿಗೆ ಮುನ್ನಡೆಯು ಈ ಮೂಲಕ ಅಭಿನಂದನೆಗಳನ್ನು ಸಲ್ಲಿಸುತ್ತಿದೆ.

# ಬಾಗಿಲು ಮುಚ್ಚಿದ ನಾಕೋಡಾ ಕ್ಲಾತಿಂಗ್

*ಸ್ನೇಹಿತರೇ,*

ದಿನಾಂಕ 05.5.2008 ರಿಂದ ಮೈಸೂರು ರಸ್ತೆಯ ಆವಲಹಳ್ಳಿಯಲ್ಲಿರುವ ನಾಕೋಡಾ ಕ್ಲಾತಿಂಗ್ ಕಾರ್ಖಾನೆಯು ಮುಚ್ಚಿದೆ. ಒಂದುವರೆ ತಿಂಗಳಿನಿಂದ ಕಾರ್ಮಿಕರಿಗೆ ಸಂಬಳ ನೀಡಿಲ್ಲ, ಜೊತೆಗೆ ಅವರ ಸಂಬಳದಿಂದ ಕಡಿತವಾದ ಪಿ.ಎಫ್ ಹಾಗೂ ಇ.ಎಸ್.ಐ ಸಹ ಸಂಸ್ಥೆಗಳಿಗೆ ಕಟ್ಟಿಲ್ಲ. ಇದರೊಂದಿಗೆ 250 ಮಂದಿ ಕಾರ್ಮಿಕರ ಜೀವನ ಬೀದಿಗೆ ಬಂದಂತಾಗಿದೆ.

ಮಾಲೀಕರು ಮೆಶೀನ್ ತೆಗೆದುಕೊಂಡು ಹೋಗಲು ಬಿಡಬಾರದೆಂದು ದಿನಾಂಕ 17ರಿಂದ ಮೂರು ದಿನಗಳವರೆಗೂ ಕಾರ್ಮಿಕರು ಸರದಿಯ ಪ್ರಕಾರ ಕಾರ್ಖಾನೆಯ ಬಾಗಿಲನ್ನು ಕಾದಿದ್ದಾರೆ. ಆದರೆ ಜೀವನಕ್ಕೆ ಕೆಲಸವನ್ನೇ ನೆಚ್ಚಿದ ಕಾರ್ಮಿಕರು ಎಷ್ಟು ದಿನ ಕಾವಲು ಕಾಯಲು ಸಾಧ್ಯ? ಕಡೆಗೆ ಗಾರ್ಮೆಂಟ್ಸ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್‌ನ ಮೂಲಕ ಕಾನೂನು ಪ್ರಕಾರ ಹೋರಾಡಲು ನಿರ್ಧರಿಸಿದ್ದಾರೆ.

ಸ್ನೇಹಿತರೇ, ಈ ರೀತಿ ಇದ್ದಕ್ಕಿದ್ದಂತೆ ಮುಚ್ಚುವ ಕಾರ್ಖಾನೆಗಳ ಬಗ್ಗೆ 'ಸೂಜಿದಾರ' ಆಗಾಗ ಕಾರ್ಮಿಕರನ್ನು ಎಚ್ಚರಿಸುತ್ತಲೇ ಬಂದಿದೆ. ತಿಂಗಳುಗಟ್ಟಲೆ ಸಂಬಳ ನಿಲ್ಲಿಸುವುದು, ಪಿ.ಎಫ್ ಹಿಡಿಯದಿರುವುದು, ಇದೆಲ್ಲಾ ತುಂಬ ದಿನ ನಡೆಯುವ ಕಾರ್ಖಾನೆಗಳ ಲಕ್ಷಣಗಳಲ್ಲ. ಆದ್ದರಿಂದ ಕಾರ್ಮಿಕರು ಯಾವುದೇ ಕಾರ್ಖಾನೆಗೆ ಸೇರಿದರೂ, ತಮಗೆ ಗುರುತಿನ ಕಾರ್ಡ್, ವೇತನ ಚೀಟಿ, ಇ.ಎಸ್.ಐ ನಂ. ಪಿ.ಎಫ್ ನಂ. ಇತ್ಯಾದಿಗಳ ವಿವರಗಳನ್ನು ಕೊಡುವಂತೆ ಆಗ್ರಹಿಸಬೇಕು. ಇಲ್ಲದಿದ್ದರೆ ಕಡೆಗೊಂದು ದಿನ ಪರದಾಡುವುದು ತಪ್ಪಿದ್ದಲ್ಲ. ನಮಗೆ ಮಾಲೀಕರ ಮೇಲೆ ಗೌರವವಿರಬೇಕು, ಆದರೆ ಸಂಬಳ ಕೊಡದಿದ್ದಾಗಲೂ ಪಾಪ ಅವನೇ ಕಷ್ಟದಲ್ಲಿದ್ದಾನೆ ಎಂಬ ಅನುಕಂಪ ಬೇಡ! ಇದರಿಂದ ತೊಂದರೆಗೊಳಗಾಗುವರು ನಾವೇ!



Scanned with OKEN Scanner

ಸಂದರ್ಶನ



# ಕರ್ನಾಟಕ ಸರ್ಕಾರದ ಕಾರ್ಮಿಕ ಕಲ್ಯಾಣ ಮಂಡಳಿಯ ಉದ್ದೇಶ ಹಾಗೂ ಕಾರ್ಯಚಟುವಟಿಕೆಗಳು

*ಕಾರ್ಮಿಕರ ಹಿತಾಸಕ್ತಿಗಾಗಿ ರೂಪುಗೊಂಡಿರುವ ಕರ್ನಾಟಕ ಸರ್ಕಾರದ ಕಾರ್ಮಿಕ ಕಲ್ಯಾಣ ಮಂಡಳಿಯ ಅಧಿಕಾರಿಗಳೊಂದಿಗೆ, ಮಂಡಳಿಯ ಉದ್ದೇಶ ಹಾಗೂ ಚಟುವಟಿಕೆಗಳ ಬಗ್ಗೆ ಸೂಜಿದಾರ ಸಂದರ್ಶನ ನಡೆಸಿತ್ತು. ಸಂದರ್ಶನದ ವಿವರ ಈ ಕೆಳಗಿನಂತಿದೆ.*

***ಸೂಜಿದಾರ: ಕಾರ್ಮಿಕ ಕಲ್ಯಾಣ ಮಂಡಳಿಯ ಸ್ಥಾಪನೆ ಯಾವಾಗ?***

1969ರಲ್ಲಿ ಕಾರ್ಮಿಕ ಕಲ್ಯಾಣ ಮಂಡಳಿ ರಚನೆಯಾಗಿದೆ. 1986ರ ವರೆಗೂ ಕಾರ್ಮಿಕ ಇಲಾಖೆಯ ಅಂಗ ಸಂಸ್ಥೆಯಾಗಿದ್ದು, ನಂತರ ಸ್ವತಂತ್ರ್ಯವಾಗಿ ಕೆಲಸ ನಿರ್ವಹಿಸುತ್ತಿದೆ.

***ಸೂಜಿದಾರ: ಮಂಡಳಿಯ ರಚನೆ ಹೇಗಿದೆ? ಇದರ ಕೆಲಸ ನಿರ್ವಹಣೆಯ ಬಗ್ಗೆ?***

ಕಾರ್ಮಿಕ ಕಲ್ಯಾಣ ಮಂಡಳಿಯಲ್ಲಿ 14 ಸದಸ್ಯರಿದ್ದಾರೆ. ಅವರಲ್ಲಿ ನಾಲ್ಕು ಮಂದಿ ಸರ್ಕಾರದ ಪ್ರತಿನಿಧಿಗಳು, 4 ಮಂದಿ ಕಾರ್ಮಿಕ ಪ್ರತಿನಿಧಿಗಳು (ಟ್ರೇಡ್ ಯೂನಿಯನ್‌ನ ಪ್ರತಿನಿಧಿಗಳು,) 4 ಮಂದಿ ಮಾಲೀಕರ ಪ್ರತಿನಿಧಿಗಳು ಹಾಗೂ ಇಬ್ಬರು ಮಹಿಳಾ ಸಾಮಾಜಿಕ ಕಾರ್ಯಕರ್ತರು ಸ್ವತಂತ್ರ ಸದಸ್ಯರಾಗಿರುತ್ತಾರೆ. ಕಾರ್ಮಿಕ ಮಂತ್ರಿಗಳು ಮಂಡಲಿಯ ಅಧ್ಯಕ್ಷರಾಗಿರುತ್ತಾರೆ. ಕಲ್ಯಾಣ ಮಂಡಳಿಯ ಆಯುಕ್ತರು ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಯಾಗಿ ದಿನನಿತ್ಯದ ಕೆಲಸಕಾರ್ಯಗಳನ್ನು ನಡೆಸಿಕೊಂಡು ಹೋಗುತ್ತಾರೆ.

***ಸೂಜಿದಾರ: ಎಷ್ಟು ವರ್ಷಕ್ಕೊಮ್ಮೆ ಈ ಮಂಡಳಿ ಪುನಾರಚನೆಯಾಗುತ್ತದೆ?***

ಪ್ರತಿ ಮೂರು ವರ್ಷಕ್ಕೊಮ್ಮೆ ಈ ಮಂಡಳಿಯು ಪುನಾರಚನೆಯಾಗುತ್ತದೆ, ಪ್ರಸ್ತುತ ಮಂಡಳಿಯು 2006 ರಲ್ಲಿ ರಚನೆಯಾಗಿದೆ.

***ಸೂಜಿದಾರ: ಮಂಡಳಿಗೆ ನಿಧಿ ಹೇಗೆ ಬರುತ್ತದೆ?***

ಪ್ರತಿ ವರ್ಷ ಡಿಸೆಂಬರ್ ತಿಂಗಳ ಕಾರ್ಮಿಕರ ವೇತನದಲ್ಲಿ 3 ರೂಗಳಂತೆ ಕಡಿತಗೊಳಿಸಿ ಅದಕ್ಕೆ ಮಾಲೀಕರು 6 ರೂ. ಗಳನ್ನು ಸೇರಿಸಿ ಒಟ್ಟು 9 ರೂ. ಗಳನ್ನು ಜನವರಿ 15 ರೊಳಗಾಗಿ ಮಾಲೀಕರು ಮಂಡಳಿಗೆ ಪಾವತಿಸಬೇಕು. ಈ ಹಣಕ್ಕೆ ಸರ್ಕಾರ ತನ್ನ ದೇಣಿಗೆಯಾಗಿ 3 ರೂ.ಗಳನ್ನು ಸೇರಿಸುತ್ತದೆ.

ಇದರ ಜೊತೆಗೆ ಕಾರ್ಖಾನೆಗಳಲ್ಲಿ ಕಾರ್ಮಿಕರು ತೆಗೆದುಕೊಳ್ಳದೆ ಇರುವ ಬೋನಸ್, ವೇತನ ಹಾಗೂ ಕಾರ್ಮಿಕರಿಂದ ವಸೂಲಿ ಮಾಡಿದ ದಂಡ ಹಾಗೂ ಇತರ ಯಾವುದೇ ಹಣವಿದ್ದರೂ ಅದನ್ನು ಮೂರು ವರ್ಷಗಳವರೆಗೂ ಕಾದು ನೋಡಿ ಕಾರ್ಮಿಕ ಕಲ್ಯಾಣ ಮಂಡಳಿಗೆ ಮಾಲೀಕರು ಪಾವತಿಸಬೇಕು. ಮಂಡಳಿಯೂ ಸಹ ನಾಲ್ಕು ವರ್ಷಗಳ ಕಾಲ ಕಾದು ನೋಡಿ ಅದನ್ನು ಮಂಡಳಿಯ 'ನಿಧಿ'ಗೆ ಮುಟ್ಟುಗೋಲು ಹಾಕಿಕೊಳ್ಳುತ್ತದೆ.

***ಸೂಜಿದಾರ: ಮಂಡಳಿಯ ಉದ್ದೇಶ ಏನು?***

ಕಾರ್ಮಿಕರಿಗೆ ನೆರವು ಒದಗಿಸುವ ಸಾಮಾಜಿಕ ಸ್ವರೂಪದ ಸಮುದಾಯ ಚಟುವಟಿಕೆಗಳನ್ನು ನಡೆಸುವುದು ಮಂಡಳಿಯ ಮುಖ್ಯ ಉದ್ದೇಶವಾಗಿದೆ.

## ಕಾರ್ಮಿಕರಿಗೆ ಉಪಯುಕ್ತವಾಗುವಂತೆ ದಿನಾಂಕ 4.1.2007 ರಿಂದ ಕಲ್ಯಾಣ ಮಂಡಳಿಯು ಜಾರಿಗೆ ತಂದಿರುವ ಹಲವಾರು ಯೋಜನೆಗಳು

1. ಕಾರ್ಮಿಕರ ಮಕ್ಕಳಿಗೆ ವಿದ್ಯಾರ್ಥಿ ವೇತನ,
   8ನೇ ತರಗತಿಯಿಂದ 10 ನೇ ತರಗತಿ – ರೂ. 500.00; ಪದವಿ ಪೂರ್ವ(ಪಿ.ಯು.ಸಿ) – ರೂ. 1000.00; ಪದವಿ (ಡಿಗ್ರಿ) – ರೂ. 1200.00; ಸ್ನಾತಕೋತ್ತರ ಪದವಿ(ಮಾಸ್ಟರ್ ಡಿಗ್ರಿ) – ರೂ. 1500.00, ವೃತ್ತಿಪರ ಕೋರ್ಸ್ (ಇಂಜಿನಿಯರಿಂಗ್, ಡಿಪ್ಲೊಮೊ, ವೈದ್ಯಕೀಯ) – ರೂ. 2000.00
2. ವೈದ್ಯಕೀಯ ಧನ ಸಹಾಯ (ಇ.ಎಸ್.ಐ ಸೌಲಭ್ಯವಿಲ್ಲದವರಿಗೆ (ಟಿ.ಬಿ, ಕ್ಯಾನ್ಸರ್ ಮುಂತಾದ ಕಾಯಿಲೆಗಳಿಗೆ)- ರೂ. 5000 ದಿಂದ 10000ರ ವರೆಗೆ.
3. ಮೃತಕಾರ್ಮಿಕರ ಅಂತ್ಯ ಸಂಸ್ಕಾರಕ್ಕೆ ಧನ ಸಹಾಯ – ರೂ. 2000.
4. ಅಪಘಾತ ಧನಸಹಾಯ ಯೋಜನೆ (ಇ.ಎಸ್.ಐ ಸೌಲಭ್ಯವಿಲ್ಲದಿರುವವರಿಗೆ) – ರೂ. 3000.
5. ಅಂಗವಿಕಲ ಕಾರ್ಮಿಕರಿಗೆ ಮೂರು ಚಕ್ರದ ಸೈಕಲ್ ಒದಗಿಸುವ ಯೋಜನೆ.
6. ಟ್ರೇಡ್ ಯೂನಿಯನ್‌ಗಳು ಹಾಗೂ ಸಂಘಸಂಸ್ಥೆಗಳ ನೆರವಿನಿಂದ, ವಾರ್ಷಿಕ ಕ್ರೀಡಾ ಚಟುವಟಿಕೆಗಳು ಅಂಗವಿಕಲರಿಗೆ ಕೃತಕ ಅಂಗ ಅಳವಡಿಕೆ ಶಿಬಿರ, ವೈದ್ಯಕೀಯ ತಪಾಸಣಾ ಶಿಬಿರ
7. ರೂಡ್‌ಶೆಟ್ ಮೂಲಕ ಶಾರ್ಟ್‌ಟರ್ಮ್ ತರಬೇತಿ ಶಿಬಿರ ನಡೆಸಲಾಗುತ್ತದೆ.

ನಿಗದಿತ ಫಾರಂಗಳನ್ನು ಭರ್ತಿ ಮಾಡಿ ಅರ್ಜಿ ಸಲ್ಲಿಸುವುದರ ಮೂಲಕ ಅರ್ಹ ಕಾರ್ಮಿಕರು ಈ ಮೇಲಿನ ಯೋಜನೆಗಳ ಸೌಲಭ್ಯಗಳನ್ನು ಪಡೆದುಕೊಳ್ಳಬಹುದು. ಕಾರ್ಮಿಕರು ಹೆಚ್ಚಿನ ಮಾಹಿತಿಗಾಗಿ ಈ ಕೆಳಕಂಡ ಸಂಖ್ಯೆ ಹಾಗೂ ವಿಳಾಸದಲ್ಲಿ ಸಂಪರ್ಕಿಸಬಹುದು.

**'ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ' 9449506451, 'ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್' 9449889183, ಕಾರ್ಮಿಕ ಕಲ್ಯಾಣ ಮಂಡಳಿ,** ಕಾರ್ಮಿಕ ಕಲ್ಯಾಣ ಭವನ, ನಂ. 48, 2ನೇ ಮಹಡಿ, ಮತ್ತಿಕೆರೆ ಮುಖ್ಯರಸ್ತೆ, ಯಶವಂತಪುರ, ಬೆಂಗಳೂರು-22. **ದೂರವಾಣಿ : 23570266.**



Scanned with OKEN Scanner

### 'ಮುನ್ನಡೆ'ಯ ಮೂಲಕ ಕಾರ್ಮಿಕರು ಪಡೆದುಕೊಂಡ ಸೌಲಭ್ಯಗಳು

- 2007-2008 ನೇ ಸಾಲಿನಲ್ಲಿ ಸುಮಾರು 200 ಗಾರ್ಮೆಂಟ್ಸ್ ಕಾರ್ಮಿಕರ ಮಕ್ಕಳು ಮುನ್ನಡೆಯ ಮೂಲಕ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸಿದ್ದು, ಹೆಚ್ಚುಕಡಿಮೆ ಎಲ್ಲರಿಗೂ ವಿದ್ಯಾರ್ಥಿ ವೇತನ ಮಂಜೂರಾಗಿದೆ. ವಿದ್ಯಾರ್ಥಿ ವೇತನದ ಚೆಕ್ ನೇರವಾಗಿ ಶಾಲೆಗಳಿಗೆ ತಲುಪಿದ್ದು, ಸೂಚನಾ ಪತ್ರಗಳನ್ನು ತಂದೆ ತಾಯಿಯರಿಗೆ ಕಳುಹಿಸಲಾಗಿದೆ.
- ಕಳೆದ 6 ತಿಂಗಳಲ್ಲಿ, ಸುಮಾರು 5 ಮಂದಿ ಮೃತ ಕಾರ್ಮಿಕರ ಕುಟುಂಬ ಸದಸ್ಯರು ಅಂತ್ಯ ಸಂಸ್ಕಾರಕ್ಕಾಗಿ ಮಂಡಳಿಯು ಕೊಡುವ ವೆಚ್ಚವನ್ನು (ರೂ.2000) ಮುನ್ನಡೆಯ ಮೂಲಕ ಪಡೆದುಕೊಂಡಿದ್ದಾರೆ.

*ಸೂಜಿದಾರ: ಪ್ರಸ್ತುತ ಮಂಡಳಿಯು ಬೆಂಗಳೂರು ನಗರದಲ್ಲಿ ನಡೆಸುತ್ತಿರುವ ಕಾರ್ಯಚಟುವಟಿಕೆಗಳೇನು?*

- ಮೈಸೂರು ರಸ್ತೆಯ ಬಾಪೂಜಿನಗರದಲ್ಲಿ ಬೇಸಿಕ್ ಕಂಪ್ಯೂಟರ್ ಕೋರ್ಸ್ ನಡೆಸಲಾಗುತ್ತಿದೆ (ಕಾರ್ಮಿಕರ ಮಕ್ಕಳಿಗೆ). ಇಂಗ್ಲಿಷ್‌ಸ್ಪೀಕಿಂಗ್‌ಕೋರ್ಸ್ ನಡೆಸಲಾಗುತ್ತಿದೆ (ಉಚಿತವಾಗಿ) (ಹೆಣ್ಣುಮಕ್ಕಳಿಗೆ ಮಾತ್ರ)
- ಪೀಣ್ಯದಲ್ಲಿ ಕಾರ್ಮಿಕರಿಗೆ ಸಂಬಂಧ ಪಟ್ಟ ಚಟುವಟಿಕೆಗಳನ್ನು ನಡೆಸಲು ಸಮುದಾಯ ಭವನ ಕಟ್ಟಲಾಗುತ್ತಿದೆ
- ಪೀಣ್ಯದ ಬಗಲಗುಂಟೆಯಲ್ಲಿ ಕಾರ್ಮಿಕರಿಗೆಂದೇ ಸುಲಭ್ ಶೌಚಾಲಯಗಳನ್ನು ನಿರ್ಮಿಸಲಾಗಿದೆ.
- ಕಾರ್ಮಿಕರು ಹೆಚ್ಚಾಗಿ ಇರುವ ಏರಿಯಾಗಳಲ್ಲಿ ನೊಂದಾಯಿತ ಟ್ರೇಡ್ ಯೂನಿಯನ್‌ಗಳು, ಹಾಗೂ ಸಂಘಸಂಸ್ಥೆಗಳ ಮೂಲಕ ಆರೋಗ್ಯ ಶಿಬಿರಗಳನ್ನು ನಡೆಸಲಾಗುತ್ತಿದೆ.
- ಇದಲ್ಲದೆ ಕಾರ್ಮಿಕರಿಗೆ ಹಲವಾರು ಸೌಲಭ್ಯಗಳನ್ನು ನೀಡಲಾಗುತ್ತಿದೆ (ವಿವರ ಪಟ್ಟಿಯಲ್ಲಿ ಕೊಟ್ಟಿದೆ)

*ಸೂಜಿದಾರ: ಯಾವ ಕಾರ್ಮಿಕರು ಇದರಲ್ಲಿ ಒಳಗೊಳ್ಳುತ್ತಾರೆ?*

- ವಂತಿಗೆ ನೀಡುವ ಪ್ರತಿಯೊಬ್ಬ ಕಾರ್ಮಿಕರೂ ಸಹ ಮಂಡಳಿಯು ನೀಡುತ್ತಿರುವ ಸೌಲಭ್ಯಗಳನ್ನು ಬಳಸಿಕೊಳ್ಳಬಹುದು.
- ಮೆಡಿಕಲ್ ಕ್ಯಾಂಪ್ ಹಾಗೂ ಸ್ಕಾಲರ್‌ಶಿಪ್‌ಗಳನ್ನು ಮಾತ್ರ ವಂತಿಗೆ ಕಟ್ಟದಿರುವ ಕಾರ್ಮಿಕರೂ ಉಪಯೋಗಿಸಿಕೊಳ್ಳಬಹುದು.

*ಸೂಜಿದಾರ: ಕಾರ್ಮಿಕರಿಗೆ ಈ ಸೌಲಭ್ಯಗಳ ಯಾವುದೇ ಪರಿಚಯವಿಲ್ಲವಲ್ಲ? ಇದರ ಪ್ರಚಾರ ಹೇಗೆ ಮಾಡಲಾಗುತ್ತಿದೆ?*

ಮಂಡಳಿಯು ತನ್ನ ಪ್ರಕಟಣೆಗಳನ್ನು ಸ್ಥಳೀಯ ಹಾಗೂ ರಾಜ್ಯಮಟ್ಟದ ದಿನಪತ್ರಿಕೆಗಳಲ್ಲಿ ನೀಡುತ್ತಿದೆ. ಆದರೆ ಇದು ಅಂದುಕೊಂಡ ಪ್ರಮಾಣದಲ್ಲಿ ಜನರಿಗೆ ತಲುಪುತ್ತಿಲ್ಲ. ಆದ್ದರಿಂದಲೇ ಈ ಬಾರಿ ಕ್ಯಾಲೆಂಡರ್ ಮಾಡಲಾಗಿದೆ.

*ಸೂಜಿದಾರ: ಮಂಡಳಿಯ ಮುಂದಿನ ಯೋಜನೆಗಳೇನು?*

- ಮೈಸೂರಿನಲ್ಲಿ ಕಾರ್ಮಿಕರಿಗಾಗಿ ಹಾಲಿಡೇ ಹೋಂ ಗಳನ್ನು ತೆರೆಯಲು ಯೋಜಿಸಿ ಪಿ.ಡಬ್ಲ್ಯೂ.ಡಿ.ಗೆ ಈಗಾಗಲೇ ಸಂಪರ್ಕಿಸಲಾಗಿದೆ.
- ಕರ್ನಾಟಕದ ಪ್ರಮುಖ ಜಿಲ್ಲೆಗಳಲ್ಲಿ ಕಾರ್ಮಿಕರಿಗಾಗಿ ಹಾಲಿಡೇ ಹೋಂ ಹಾಗೂ ಸುಲಭ್ ಶೌಚಾಲಯಗಳನ್ನು ನಿರ್ಮಿಸಲು ಯೋಜಿಸಲಾಗುತ್ತಿದೆ.
- ಸರ್ಕಾರದಿಂದ ಕಾರ್ಮಿಕರಿಗೆ ದೊರೆಯುವ ಎಲ್ಲ ರೀತಿಯ ಸೌಲಭ್ಯದ ವಿವರಗಳನ್ನು ಪುಸ್ತಕ ರೂಪದಲ್ಲಿ ಮುದ್ರಿಸಿ ಒಂದು ಕೈಪಿಡಿಯನ್ನು ಹೊರತರುವ ಯೋಜನೆ ಇದೆ. ❑

# ಮಾಹಿತಿ

## ಕನಿಷ್ಠ ವೇತನ 2008-2009

**ಬೆಂಗಳೂರು ನಗರ ಪ್ರದೇಶದ ಗಾರ್ಮೆಂಟ್ಸ್ ಕಾರ್ಮಿಕರಿಗೆ ಇದು ಸರ್ಕಾರ ನಿಗದಿಪಡಿಸಿದ ಕನಿಷ್ಠ ವೇತನವಾಗಿದ್ದು, ಮಾಲೀಕರು ಇದಕ್ಕಿಂತ ಕಡಿಮೆ ವೇತನ ಕೊಡುವುದು ಕಾನೂನಿಗೆ ವಿರುದ್ಧವಾಗಿದೆ. ಉದಾಹರಣೆಗೆ ಮೇ 2008 ರಿಂದ ಹೆಲ್ಪರ್ ಒಬ್ಬರಿಗೆ ತಿಂಗಳಿಗೆ ರೂ. 2644.20 ರೂ. (101.70 ರೂ. x 26 ದಿನಗಳು) ವೇತನ ಸಿಗಲೇ ಬೇಕು.**

**ಏಪ್ರಿಲ್ 2009ರ ವರೆಗೆ ಗಾರ್ಮೆಂಟ್ಸ್ ಉದ್ಯಮದ ಕಾರ್ಮಿಕರು ಈ ಕೆಳಗೆ ಕೊಟ್ಟಿರುವ ಪಟ್ಟಿಯಂತೆ ವೇತನ ಪಡೆಯಲು ಅರ್ಹರಾಗಿರುತ್ತಾರೆ.**

| ಕ್ರಮ ಸಂಖ್ಯೆ | ಕೆಲಸದ ಶ್ರೇಣಿ | ಮೂಲ ವೇತನ ರೂ. | ತುಟ್ಟಿಭತ್ಯೆ (ಡಿ.ಎ) (ಏಪ್ರಿಲ್ 2008) ರೂ. | ಒಟ್ಟು ವೇತನ ರೂ. |
|---|---|---|---|---|
| 1 | ಅತಿ ಕುಶಲ (High Skilled) | | | |
| | ಟೈಲರ್ ಗ್ರೇಡ್ 1 | 78.70 | 30.00 | 108.70 |
| 2. | ಕುಶಲ (Skilled) | | | |
| | ಟೈಲರ್ ಗ್ರೇಡ್ 2 | 77.70 | 30.00 | 107.70 |
| 3 | ಅರೆಕುಶಲ (Semi Skilled) | | | |
| | ಟೈಲರ್ ಗ್ರೇಡ್ 3 | 76.20 | 30.00 | 106.20 |
| | ಮೆಷರ್ ಮೆಂಟ್ ಚೆಕರ್ | 76.20 | 30.00 | 106.20 |
| | ಐರನರ್ | 76.20 | 30.00 | 106.20 |
| | ಬಟನ್ ಮೆಶೀನ್ ಆಪರೇಟರ್ | 76.20 | 30.00 | 106.20 |
| | ಓವರ್‌ಲಾಕ್ ಮಶೀನ್ ಆಪರೇಟರ್ | 76.20 | 30.00 | 106.20 |
| | ಕಾಜಾ ಮೆಶೀನ್ ಆಪರೇಟರ್ | 76.20 | 30.00 | 106.20 |
| 4 | ಕುಶಲವಲ್ಲದ (Unskilled) | | | |
| | ಪ್ಯಾಕರ್ | 71.70 | 30.00 | 101.70 |
| | ಹೆಲ್ಪರ್ | 71.70 | 30.00 | 101.70 |
| | ಟ್ರಿಮ್ಮರ್ | 71.70 | 30.00 | 101.70 |
| | ಆಫೀಸ್ ಬಾಯ್ | 71.70 | 30.00 | 101.70 |
| | ಲೇ ಹಾಕುವವರು | 71.70 | 30.00 | 101.70 |
| | ಇತರೇ ಯಾವುದೇ ತರಬೇತಿಯಿಲ್ಲದ ಕಾರ್ಮಿಕರು | 71.70 | 30.00 | 101.70 |

ಗಾರ್ಮೆಂಟ್ಸ್ ಕಾರ್ಮಿಕರಿಗೆ ಈ ಪಟ್ಟಿಯಲ್ಲಿರುವುದಕ್ಕಿಂತ ಕಡಿಮೆ ವೇತನ ದೊರೆಯುತ್ತಿದ್ದಲ್ಲಿ , **ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ (GATWU)** ಅನ್ನು ಈ ಮೊಬೈಲ್ ಸಂಖ್ಯೆಗಳಲ್ಲಿ ಸಂಪರ್ಕಿಸಬಹುದು – 9980863795, 9449889183



Scanned with OKEN Scanner

# ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಆರೋಗ್ಯ ರಕ್ಷಣೆ – ಮುನ್ನಡೆಯ ಹೊಸ ಹೆಜ್ಜೆ

*ಕಳೆದ ನಾಲ್ಕು ವರ್ಷಗಳಿಂದ ಮುನ್ನಡೆ ಸಂಘಟನೆಯು ಗಾರ್ಮೆಂಟ್ಸ್ ಕಾರ್ಮಿಕರ ಕೆಲಸಕ್ಕೆ ಸಂಬಂಧಪಟ್ಟ ತೊಂದರೆಗಳು ಹಾಗೂ ಅವರ ಸಾಮಾಜಿಕ ತೊಂದರೆಗಳಿಗೆ ಸ್ಪಂದಿಸುತ್ತಿದೆ. ಈಗ ಅವರ ಆರೋಗ್ಯದ ಕಡೆಗೂ ಗಮನ ಹರಿಸಬೇಕೆಂದು ಬಯಸಿ, ಅದರ ಮೊದಲ ಹೆಜ್ಜೆಯಾಗಿ ನಾಯಂಡಹಳ್ಳಿಯಲ್ಲಿ ದಿನಾಂಕ 18–5–2008ರಂದು ಆರೋಗ್ಯ ತಪಾಸಣಾ ಶಿಬಿರವನ್ನು ಹಮ್ಮಿಕೊಂಡಿತ್ತು.*

*ಆತ್ಮೀಯ ಸ್ನೇಹಿತರೇ,*

ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆಯು ದಿನಾಂಕ 18.5.2008 ರಂದು ನಾಯಂಡ ಹಳ್ಳಿಯ ಕೇಂದ್ರದಲ್ಲಿ ಗಾರ್ಮೆಂಟ್ಸ್ ಕಾರ್ಮಿಕರಿಗಾಗಿ 'ಉಚಿತ ಆರೋಗ್ಯ ತಪಾಸಣೆ'ಯನ್ನು ಹಮ್ಮಿಕೊಂಡಿತ್ತು. ಸಮುದಾಯ ಆರೋಗ್ಯ ಕೋಶದ ಡಾ. ಸುಕನ್ಯಾ ಹಾಗೂ ಪಿ.ಯುಸಿ.ಎಲ್ ನ ಡಾ. ಲಕ್ಷ್ಮೀನಾರಾಯಣ, ಅಲ್ಲದೆ, ಡಾ ರೋಹಿಣಿ, ಡಾ ಶಿಲ್ಪಾ ಹಾಗೂ ಡಾ ಆದಿತ್ಯಾ ಅವರು ಗಾರ್ಮೆಂಟ್ಸ್ ಕಾರ್ಮಿಕರ ಸಾಮಾನ್ಯ ಆರೋಗ್ಯ ತಪಾಸಣೆ ನಡೆಸಿ ಉಚಿತ ಔಷಧವನ್ನೂ ವಿತರಿಸಿದರು. ಶಿಬಿರವು 11.30 ಕ್ಕೆ ಪ್ರಾರಂಭವಾಗಿ ಸಂಜೆ 4 ಗಂಟೆಗೆ ಮುಗಿಯಿತು. ಸುಮಾರು 85 ಮಂದಿ ಕಾರ್ಮಿಕರು ಹಾಗೂ 35 ಮಂದಿ ಕಾರ್ಮಿಕ ಕುಟುಂಬದ ಸದಸ್ಯರು ಈ ಶಿಬಿರದ ಲಾಭ ಪಡೆದುಕೊಂಡರು.

ಶಿಬಿರದಲ್ಲಿ ಚಾಯ್ಸ್ ಅಪಾರೆಲ್ಸ್, ರಿಬೌಂಡ್ ಎಕ್ಸ್‌ಪೋರ್ಟ್ಸ್, ಅನ್ವರ್ಥ್ ಅಪಾರೆಲ್ಸ್, ದೇವಕಿ ಡಿಸೈನ್ಸ್, ಅರವಿಂದ್ ಮಿಲ್ಸ್, ಟೆಕ್ಸ್‌ಪೋರ್ಟ್ಸ್ ಇಂಡಸ್ಟ್ರೀಸ್, ಎಚ್.ಪಿ.ಎಫ್. ಹಾಗೂ ನಮಸ್ತೆ ಎಕ್ಸ್‌ಪೋರ್ಟ್ಸ್ ಕಾರ್ಖಾನೆಗಳಿಂದ ಕಾರ್ಮಿಕರು ಭಾಗವಹಿಸಿದ್ದರು.



ಶಿಬಿರದಲ್ಲಿ ಕಂಡು ಬಂದ ಮುಖ್ಯ ಆರೋಗ್ಯ ಸಮಸ್ಯೆಯೆಂದರೆ, ಬಹುಪಾಲು ಮಹಿಳೆಯರು ರಕ್ತಹೀನತೆಯಿಂದ ಬಳಲುತ್ತಿರುವುದು ಹಾಗೂ ಶಿಬಿರದಲ್ಲಿ ಭಾಗವಹಿಸಿದ 5 ವರ್ಷದ ಒಳಗಿನ ಮಕ್ಕಳು ಪೌಷ್ಟಿಕಾಂಶದ ಕೊರತೆಯಿಂದ ಬಹಳ ಕಡಿಮೆ ತೂಕ ಹೊಂದಿರುವುದು. ಇನ್ನುಳಿದಂತೆ, ತಲೆನೋವು ಬೆನ್ನುನೋವು, ಮುಟ್ಟಿಗೆ ಸಂಬಂಧ ಪಟ್ಟ ತೊಂದರೆಗಳು ಕಂಡುಬಂದವು.

## ಹಿನ್ನೆಲೆ

ಗಾರ್ಮೆಂಟ್ಸ್ ಕಾರ್ಮಿಕರಾದ ನಾವು ದಿನದಲ್ಲಿ ಒಂದು ಕ್ಷಣವೂ ಬಿಡುವಿಲ್ಲದಂತೆ ದುಡಿಯುತ್ತಿದ್ದೇವೆ. ಕಾರ್ಖಾನೆಯಲ್ಲಿ ಪ್ರೊಡಕ್ಷನ್‌ಒತ್ತಡ, ಮನೆಯಲ್ಲಿ ಕೆಲಸದಒತ್ತಡ ಇವುಗಳಿಂದ ನಮ್ಮ ಆರೋಗ್ಯದ ಕಡೆಗೆ ಗಮನ ಹರಿಸಲು ಸಾಧ್ಯವಾಗುತ್ತಿಲ್ಲ. ಪ್ರತಿನಿತ್ಯ ಗಾರ್ಮೆಂಟ್ಸ್ ಮಹಿಳೆಯರು ಬೆನ್ನುನೋವು, ತಲೆನೋವು, ಕಣ್ಣುನೋವು, ಉಸಿರಾಟದ ತೊಂದರೆ, ಮುಟ್ಟಿನ ತೊಂದರೆ, ಇತ್ಯಾದಿಗಳನ್ನು ಅನುಭವಿಸುತ್ತಲೇ ಇದ್ದಾರೆ. ಆದರೆ ಇವುಗಳ ಕಡೆಗೆ ಗಮನವೇ ಹರಿಸದೇ ಉಪೇಕ್ಷಿಸುತ್ತಿರುವುದೇ ಹೆಚ್ಚು. ತೀರಾ ತಡೆಯಲು



ಸಾಧ್ಯವಿಲ್ಲ ಎಂದಾಗ ಹತ್ತಿರದ ಖಾಸಗಿ ವೈದ್ಯರ ಬಳಿ ಅಥವಾ ಇ.ಎಸ್.ಐ.ಗೆ ಹೋಗುತ್ತಾರೆ.

ಆದರೆ ಈ ಆರೋಗ್ಯದ ಸಮಸ್ಯೆಗಳೆಲ್ಲ ತಾವು ಮಾಡುತ್ತಿರುವ ಕೆಲಸದ ಪರಿಣಾಮ ಎಂದು ಮಹಿಳಾ ಕಾರ್ಮಿಕರು ತಿಳಿದುಕೊಳ್ಳುವ ಅವಶ್ಯಕತೆ ಇಂದು ಬಹಳ ಇದೆ. ಪ್ರತಿನಿತ್ಯ ಎಂಟರಿಂದ ಹತ್ತು ಗಂಟೆಗಳ ಕಾಲ ಕುಳಿತು ಅಥವಾ ನಿಂತು ಕೆಲಸ ಮಾಡುತ್ತಿರುವುದು, ಏಕಾಗ್ರತೆಯಿಂದ ಸೂಜಿಯನ್ನೇ ದಿಟ್ಟಿಸುತ್ತಾ ಹೊಲೆಯುವುದು, ಧೂಳು ತುಂಬಿದ ವಾತಾವರಣ, ಪೌಷ್ಟಿಕ ಆಹಾರದ ಕೊರತೆ, ಮಾನಸಿಕ ಒತ್ತಡ ಇವುಗಳ ಪರಿಣಾಮವೇ ಈ ಎಲ್ಲಾ ಆರೋಗ್ಯದ ಸಮಸ್ಯೆಗಳು. ಇವುಗಳನ್ನು ನಿರ್ಲಕ್ಷಿಸಿದರೆ, ಮುಂದೆ ಇನ್ನೂ ಹೆಚ್ಚಿನ ಪರಿಣಾಮವನ್ನು ಅನುಭವಿಸಬೇಕಾಗಬಹುದು. ಆದ್ದರಿಂದ ನಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳುವ ಬಗ್ಗೆ ಇನ್ನಾದರೂ ಗಂಭೀರವಾಗಿ ಯೋಚಿಸಬೇಕಾಗಿದೆ. ನಮ್ಮ ಅರೋಗ್ಯ ನಮ್ಮ ಜವಾಬ್ದಾರಿಯಾದ್ದರಿಂದ ನಿರ್ಲಕ್ಷಿಸಿದರೆ ನಮಗೇ ತೊಂದರೆಯಾಗುತ್ತದೆ.

ಇನ್ನು ಮುಂದೆಯೂ ಗಾರ್ಮೆಂಟ್ಸ್ ಕಾರ್ಮಿಕರ ಆರೋಗ್ಯದ ಬಗ್ಗೆ ಮುನ್ನಡೆ ಕೆಲಸ ಮಾಡುತ್ತಿದ್ದು, ಹೆಚ್ಚಿನ ಮಾಹಿತಿಗಾಗಿ ಕಾರ್ಮಿಕರು ಮುನ್ನಡೆಯನ್ನು ಈ ಸಂಖ್ಯೆಗಳಲ್ಲಿ ಸಂಪರ್ಕಿಸಬಹುದು : 9449506451, 9739200749

❑

## ನಾವು – ಹೂವು

*ಇಂದಲ್ಲ ನಾಳೆ ಸಾಯಲೇ ಬೇಕು*
*ನಾವು – ನೀವು!*
*ಹೊತ್ತಿಸಿ ಅಕ್ಷರಲ್ಲಿ ಕ್ರಾಂತಿಯ ಕಿಡಿ*
*ಹೆಚ್ಚುತ್ತಾ ಬರಲಿ ಹೋರಾಟದ ಕಾವು*
*ಕೊನೆಗೊಮ್ಮೆ ಕೊನೆಗಾಣಲಿ*
*ಕಾರ್ಮಿಕರ ನೋವು*
*ಅರಳಲಿ ಎಲ್ಲರ ಮನದಲಿ*
*ಗೆಲುವಿನ ಹೂವು*

■ *ದೀಪಾ ಗಿರೀಶ್*

# ಅನುಭವ ಹಂಚಿಕೊಂಡ ಅಸಂಘಟಿತರು

*ಇಂದು ದೇಶದಲ್ಲಿ ಸುಮಾರು ಶೇ. 62ರಷ್ಟು ಮಂದಿ ಅಸಂಘಟಿತ ಕಾರ್ಮಿಕರಾಗಿದ್ದಾರೆ. ಇವರ ಕೆಲಸದ ಪರಿಸ್ಥಿತಿ, ಸಂಘಟನೆಯ ಪ್ರಯತ್ನಗಳ ಬಗ್ಗೆ ಪರಸ್ಪರ ಮಾಹಿತಿ ಇಲ್ಲ. ಒಬ್ಬರ ಪರಿಸ್ಥಿತಿ ಮತ್ತೊಬ್ಬರಿಗೆ ತಿಳಿಯುತ್ತಿಲ್ಲ. ಈ ಅಂಶವನ್ನು ಗಮನದಲ್ಲಿಟ್ಟುಕೊಂಡು ಬೆಂಗಳೂರು ನಗರದ ಅಸಂಘಟಿತ ಕಾರ್ಮಿಕರು ತಮ್ಮ ಅನುಭವಗಳನ್ನು ಹಂಚಿಕೊಳ್ಳಲು ಒಂದು ಅವಕಾಶವನ್ನು ಒದಗಿಸಲು ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ ಹಾಗೂ ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್, ಏಪ್ರಿಲ್ 23 ಹಾಗೂ 24 ರಂದು ಎರಡು ದಿನಗಳ ಸಮಾಲೋಚನಾ ಸಭೆಯನ್ನು ಎಸ್.ಸಿ.ಎಮ್ ಹೌಸ್, ಮಿಷನ್‌ರೋಡ್, ಬೆಂಗಳೂರು ಇಲ್ಲಿ ಏರ್ಪಡಿಸಿತ್ತು.*

ಸಮಾಲೋಚನಾ ಸಭೆಯಲ್ಲಿ ಸುಮಾರು 13 ವಿವಿಧ ಅಸಂಘಟಿತ ಕ್ಷೇತ್ರದ ಸಂಘಟನೆಗಳು ಭಾಗವಹಿಸಿ ತಮ್ಮ ಕೆಲಸದ ಪರಿಸ್ಥಿತಿ, ಸಂಘಟನಾ ಕಾರ್ಯ ತಂತ್ರ ಹಾಗೂ ಮುಂದಿನ ತಮ್ಮ ಯೋಜನೆಗಳನ್ನು ಕುರಿತು ಚರ್ಚಿಸಿದರು. ಇವರಲ್ಲಿ 4 ಸಂಘಟನೆಗಳು ಗುಲ್ಬರ್ಗಾದಿಂದ ಆಗಮಿಸಿದ್ದವು.

ಇತ್ತೀಚಿನ ವರದಿಯ ಪ್ರಕಾರ, ಭಾರತ ದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇ. 62 ರಷ್ಟು ಮಂದಿ ಅಸಂಘಟಿತ ಕ್ಷೇತ್ರಗಳಲ್ಲಿ ದುಡಿಯುವ ಕಾರ್ಮಿಕರಾಗಿದ್ದಾರೆ. ಇದರಲ್ಲಿಯೂ ಬಹು ಪಾಲು ಮಹಿಳೆಯರು. ಇಂದು ಬೆಂಗಳೂರಿನಲ್ಲಿ, ಕಟ್ಟಡ ಕಾರ್ಮಿಕರು, ಬೀಡಿ ಕಾರ್ಮಿಕರು, ಕೂಲಿ ಕಾರ್ಮಿಕರು, ಮನೆಗೆಲಸದವರು, ತರಕಾರಿ ಮಾರುವವರು, ಗುತ್ತಿಗೆ ಪೌರ ಕಾರ್ಮಿಕರು, ಲೈಂಗಿಕ ಕಾರ್ಯಕರ್ತರು, ಪೆಟ್ರೋಲ್ ಪಂಪ್‌ಗಳಲ್ಲಿ ದುಡಿಯುವವರು, ಆಸ್ಪತ್ರೆಯಲ್ಲಿನ ನರ್ಸ್‌ಗಳು ಮತ್ತು ಕಾರ್ಮಿಕರು ಹೀಗೆ ಮುಕ್ಕಾಲು ಭಾಗ ಜನಸಂಖ್ಯೆಯು ಈ ಅಸಂಘಟಿತ ವಲಯದಲ್ಲಿ ಕೆಲಸ ಮಾಡುತ್ತಿದ್ದು, ಹಲವಾರು ತೊಂದರೆಗಳನ್ನು ಎದುರಿಸುತ್ತಿದ್ದಾರೆ. ಸಾಮಾನ್ಯವಾಗಿ ಅಸಂಘಟಿತ ವಲಯಕ್ಕೆ ಕಾರ್ಖಾನೆಯ ಕಾಯಿದೆಗಳು ಅನ್ವಯವಾಗುವುದಿಲ್ಲ, ಆದರೆ ಎಲ್ಲಾ ಕಾರ್ಮಿಕ ಕಾನೂನುಗಳು ಅನ್ವಯವಾಗುವ, ನಿರ್ದಿಷ್ಟ ಮಾಲೀಕರಿರುವ, ಒಂದೇ ಸೂರಿನಡಿ ಕೆಲಸ ಮಾಡುವ ಅವಕಾಶವಿರುವ ಗಾರ್ಮೆಂಟ್ಸ್ ಉದ್ಯಮದ ಕಾರ್ಮಿಕರ ಪರಿಸ್ಥಿತಿಯೂ ಇತರ ಅಸಂಘಟಿತ ಕ್ಷೇತ್ರದ ಕಾರ್ಮಿಕರಿಗಿಂತ ಭಿನ್ನವಾಗಿಲ್ಲ.



ಎರಡು ದಿನಗಳ ಸಭೆಯಲ್ಲಿ ಈ ಅಸಂಘಟಿತ ಕ್ಷೇತ್ರದ ಕಾರ್ಮಿಕರು ತಮ್ಮ ಕೆಲಸದ ಪರಿಸ್ಥಿತಿ, ಸಂಘಟನೆಯ ಗುರಿ, ಬೇಡಿಕೆಗಳನ್ನು ಕುರಿತು ಚರ್ಚಿಸಿದರು. ಈ ಚರ್ಚೆಯಿಂದ ಹೊರಬಂದ ಸಾಮಾನ್ಯ ಅಂಶಗಳೆಂದರೆ, ಈ ಅಸಂಘಟಿತ ಕಾರ್ಮಿಕರೆಲ್ಲರಿಗೂ

- ಕೆಲಸದ ಭದ್ರತೆ ಇಲ್ಲದಿರುವುದು
- ಅತಿ ಕಡಿಮೆ ವೇತನ
- ಮಹಿಳಾ ಕಾರ್ಮಿಕರನ್ನು ಗೌರವವಿಲ್ಲದೆ ನಡೆಸಿಕೊಳ್ಳುವುದು
- ಯಾವುದೇ ಸಾಮಾಜಿಕ ಸುರಕ್ಷೆ ಇಲ್ಲದಿರುವುದು

ಈ ಎರಡು ದಿನಗಳ ಸಮಾಲೋಚನೆಯನ್ನು ಖ್ಯಾತ ಮಹಿಳಾ ಚಿಂತಕಿ ಡಾ. ವಿಜಯಾ ಅವರು ತಮ್ಮ ಭಾಷಣದ ಮೂಲಕ ಉದ್ಘಾಟಿಸಿದರು. ವಿಮೋಚನಾ ಸಂಸ್ಥೆಯ ಶಕೂನ್ ಮೋಹಿನಿ ಹಾಗೂ ಸ್ತ್ರೀ ಜಾಗೃತಿ ಸಮಿತಿಯ ಗೀತಾ ಮೆನನ್ ಹಾಗೂ ಹೆಂಗಸರ ಹಕ್ಕಿನ ಸಂಘದ ಉಷಾ ಅವರು ಸೆಷನ್‌ಗಳನ್ನು ನಡೆಸಿಕೊಟ್ಟರು.

ಕಡೆಯಲ್ಲಿ ಅಸಂಘಟಿತ ಕ್ಷೇತ್ರದ ಕಾರ್ಮಿಕರೆಲ್ಲರೂ ಒಟ್ಟಾಗಿ ಸೇರುವುದರಲ್ಲಿ ಈ ಸಮಾಲೋಚನಾ ಸಭೆ ಮೊದಲ ಹೆಜ್ಜೆ ಮಾತ್ರ. ಇನ್ನೂ ಇದು ಮುಂದುವರೆಯಬೇಕಿದೆ, ಮೊದಲು ಸಂಘಟನೆಗಳ ನಡುವೆ ಪರಸ್ಪರ ಮಾಹಿತಿಯ ವಿನಿಮಯದ ಪ್ರಕ್ರಿಯೆ ನಡೆಯಬೇಕು ಎಂದು ತೀರ್ಮಾನಿಸಲಾಯಿತು. ❑



## ಕಾಮನಬಿಲ್ಲು

# ಶುಭಾಶಯಗಳು



ರೇವತಿ
ಹುಟ್ಟಿದ ದಿನಾಂಕ:
24-07-1996
ತಾಯಿ : ಶಾಂತಲಕ್ಷ್ಮೀ
ಕಾರ್ಖಾನೆ :
ನಮಸ್ತೆ ಎಕ್ಸ್‌ಪೋರ್ಟ್ಸ್



ವಿಶಾಲಾಕ್ಷಿ ದಂಪತಿಗಳು
18ನೇ ವಿವಾಹ ವಾರ್ಷಿಕೋತ್ಸವ
ಕಾರ್ಖಾನೆ: ಎಂ.ಬೀ. ಅಪಾರೆಲ್ಸ್



ಚೈತ್ರ ಕೆ.
ಹುಟ್ಟಿದ ದಿನಾಂಕ:
8-6-1995
ತಾಯಿ : ರುಕ್ಮಿಣಿ
ಕಾರ್ಖಾನೆ :
ವಿಗೋಸ ಎಕ್ಸ್‌ಪೋರ್ಟ್ಸ್

**2007-08ನೇ ಸಾಲಿನ ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ. ಪರೀಕ್ಷೆಯಲ್ಲಿ ಉತ್ತಮ ಅಂಕಗಳಿಸಿದ ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮಕ್ಕಳನ್ನು 'ಸೂಜಿದಾರ' ಪತ್ರಿಕೆ ಅಭಿನಂದಿಸುತ್ತಿದೆ.**



ಜಗನ್ನಾಥ್
ಎಸ್.ಎಸ್.ಎಲ್.ಸಿ.
60%
ತಾಯಿ : ಪದ್ಮಾ
ಕಾರ್ಖಾನೆ :
ವಿಗೋಸಾ ಎಕ್ಸ್‌ಪೋರ್ಟ್ಸ್



ಪ್ರಮೋದ್ ಎಂ.ಎಸ್.
ಎಸ್.ಎಸ್.ಎಲ್.ಸಿ.
87%
ತಾಯಿ : ಜ್ಯೋತಿ
ಕಾರ್ಖಾನೆ :
ಲೀಲಾ ಸ್ಕಾಟಿಷ್ ಲೇಸ್ ಪ್ರೈ.ಲಿ.,
BHEL



ಶೃತಿ ಎಸ್.
2ನೇ ಪಿ.ಯು.ಸಿ. – 73%
ತಾಯಿ : ಸುಮಾ
ಕಾರ್ಖಾನೆ :
ಲೀಲಾ ಸ್ಕಾಟಿಷ್ ಲೇಸ್ ಪ್ರೈ. ಲಿ.



ಮಂಜುನಾಥ್
2ನೇ ಪಿ.ಯು.ಸಿ. – 71.33%
ತಾಯಿ : ಶಾಂತಲಕ್ಷ್ಮಿ
ಕಾರ್ಖಾನೆ :
ನಮಸ್ತೆ ಎಕ್ಸ್‌ಪೋರ್ಟ್ಸ್



ನಿರ್ಮಲಾ
2ನೇ ಪಿ.ಯು.ಸಿ. – 69%
ತಾಯಿ : ಮೋಕ್ಷಾಯಿಣಿ
ಕಾರ್ಖಾನೆ :
ಬಾಂಬೆ ರೆಯಾನ್ ಫ್ಯಾಷನ್ಸ್ ಲಿ.,

ಕಾರ್ಮಿಕ ಮಿತ್ರರೇ,

ಸೂಜಿದಾರ ನಿಮ್ಮದೇ. ಇಲ್ಲಿ ಬರೆಯುವ ವಿಷಯ ನಿಮ್ಮವೇ. ಇದನ್ನು ಇನ್ನೂ ಚಂದಗೊಳಿಸಲು ತಮ್ಮಿಂದ ಸಲಹೆ, ಸೂಚನೆ ಸುದ್ದಿಗಳನ್ನು ನಮಗೆ ತಲುಪಿಸಿ. ತಮ್ಮಿಂದ ಪ್ರತಿಕ್ರಿಯೆಗಳನ್ನು ನಾವು ಸದಾ ನಿರೀಕ್ಷಿಸುತ್ತಿದ್ದೇವೆ.

ದಯವಿಟ್ಟು ಈ ಕೆಳಗಿನ ವಿಳಾಸಕ್ಕೆ ತಮ್ಮ ಅನಿಸಿಕೆಗಳನ್ನು ಕಳುಹಿಸಬೇಕಾಗಿ ವಿನಂತಿ.

*ಸಂಪಾದಕ ಮಂಡಳಿ*

# ನೆರವು

ಪ್ರತಿ ಶನಿವಾರ ಹಾಗೂ ಭಾನುವಾರಗಳಂದು, ಗಾರ್ಮೆಂಟ್ಸ್ ಕಾರ್ಮಿಕರು ಯಾವುದೇ ಕಾರ್ಮಿಕ ವಿವಾದಕ್ಕಾಗಿ, ತಮ್ಮ ಮೇಲಿನ ದೌರ್ಜನ್ಯ, ಕೌಟುಂಬಿಕ ಸಲಹೆಗಾಗಿ ತಜ್ಞ ವಕೀಲರನ್ನು ಈ ಕೆಳಕಂಡ ಸಂಸ್ಥೆಯಲ್ಲಿ ಉಚಿತವಾಗಿ ಸಂಪರ್ಕಿಸಬಹುದು

**ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ**
ನಂ.8/3, ಶ್ರೀಮಾತಾ ನಿಲಯ
ನ್ಯೂಟಿಂಬರ್‌ಯಾರ್ಡ್ ಲೇಔಟ್
ಮೈಸೂರು ರಸ್ತೆ, ಬೆಂಗಳೂರು-29
ದೂ.: 26751320,

ಶನಿವಾರ ಸಂಜೆ 5-30ರ ನಂತರ ಹಾಗೂ ಭಾನುವಾರ ಬೆಳಿಗ್ಗೆ 10-30ರ ನಂತರ

ಮಹಿಳಾ ಕಾರ್ಮಿಕರಿಗೆ ಸಹಾಯ ಮಾಡುವ ಇನ್ನಿತರೆ ಸಂಸ್ಥೆಗಳು

1. **ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ (GATWU)**
   ನಂ. 27, 5ನೇ ಮುಖ್ಯರಸ್ತೆ
   6ನೇ ಅಡ್ಡರಸ್ತೆ, ಸಂಪಂಗಿರಾಮನಗರ
   ಬೆಂಗಳೂರು – 560 027.
2. **ಕರ್ನಾಟಕ ಮಹಿಳಾ ಆಯೋಗ**
   ನಂ. 105, ಮೊದಲನೇ ಮಹಡಿ
   ಕರ್ನಾಟಕ ಗೃಹ ಮಂಡಳಿ ಕಟ್ಟಡ
   ಕಾವೇರಿಭವನ, ಕೆ.ಜಿ.ರಸ್ತೆ,
   ಬೆಂಗಳೂರು-560009
   ದೂ.: 22216485
3. **ವನಿತಾ ಸಹಾಯವಾಣಿ**
   ಪೊಲೀಸ್ ಕಮಿಷನರ್, ಕಛೇರಿ ಆವರಣ
   ಇನ್‌ಫೆಂಟರಿ ರಸ್ತೆ, ಬೆಂಗಳೂರು
   ಉಚಿತ ದೂರವಾಣಿ: 1091
   ದೂ.: 22943225
4. **ವಿಮೋಚನಾ**
   ನಂ, 33/1-9, ತ್ಯಾಗರಾಜ ಬಡಾವಣೆ
   ಜೈಭಾರತನಗರ, ಮಾರುತಿ ಸೇವಾನಗರ
   ಬೆಂಗಳೂರು-38
   ದೂ.: 25492781 / 25492782
5. **ಕರ್ನಾಟಕ ಕಾನೂನು ಸೇವೆಗಳ ಪ್ರಾಧಿಕಾರ**
   ನ್ಯಾಯ ದೇಗುಲ
   ಎಚ್. ಸಿದ್ಧಯ್ಯ ರಸ್ತೆ
   ಬೆಂಗಳೂರು-27

ಸಂಪಾದಕ ಮಂಡಳಿ : ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ, ನಂ, 8/3, ಶ್ರೀಮಾತಾ ನಿಲಯ, ಎನ್.ಟಿ.ವೈ. ಲೇಔಟ್, ಮೈಸೂರು ರಸ್ತೆ, ಬೆಂ-560026. ದೂ. : 2675 1320
ಪ್ರಕಾಶಕರು : ಸಿವಿಡೆಪ್-ಇಂಡಿಯಾ. ಮುದ್ರಣ : ಇಳಾ ಮುದ್ರಣ, ಬೆಂಗಳೂರು – 560 026. ದೂ. : 26757159

Scanned with OKEN Scanner